ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560 002

ಸಂ:ಆಯುಕ್ತರು/ಪಿಎಸ್ಆರ್/ಜಿ-92/2020-21 ದಿನಾಂಕ:28-05-2020

# ತಿದ್ದುಪಡಿ ಕಛೇರಿ ಆದೇಶ

ವಿಷಯ: ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಕಾರ್ಯಕ್ರಮಗಳಿಗೆ 2020-21ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ವಾರ್ಡ್‌ಗೆ ರೂ.20.00 ಲಕ್ಷ ಮೀಸಲಿಟ್ಟಿರುವ ಅನುದಾನವನ್ನು ಬಳಸಿಕೊಳ್ಳುವ ಕುರಿತು ಮಾರ್ಗಸೂಚಿಗಳು.

ಉಲ್ಲೇಖ:1. ದಿನಾಂಕ:22-04-2020ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಸ್ವ-ನಿರ್ಣಯ ವಿಷಯದ ಸಂಖ್ಯೆ : (03)24/2020-21.

*****

## ಪ್ರಸ್ತಾವನೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2020-21ನೇ ಸಾಲಿನ ಆಯವ್ಯಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟುವ ಸಲುವಾಗಿ ಪ್ರತಿ ವಾರ್ಡ್‌ಗೆ ರೂ.20.00 ಲಕ್ಷಗಳಂತೆ ಅನುದಾನವನ್ನು ಮೀಸಲಿಟ್ಟಿದ್ದು, ಈ ಸಂಬಂಧ ದಿನಾಂಕ:22-04-2020ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಸ್ವ-ನಿರ್ಣಯ ವಿಷಯ ಸಂ:(02)23/2020-21 ರಲ್ಲಿ "2020-21ನೇ ಸಾಲಿನ ಆಯವ್ಯಯದಲ್ಲಿ ಪಿ-ಕೋಡ್ ಪಿ-1771 ಲೆಕ್ಕಶೀರ್ಷಿಕೆ ಅಡಿಯಲ್ಲಿ ಪ್ರತಿ ವಾರ್ಡ್‌ಗೆ ಮೀಸಲಿಟ್ಟಿರುವ ಅನುದಾನದ ಪೈಕಿ ರೂ.20.00 ಲಕ್ಷಗಳನ್ನು ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಕಾರ್ಯಕ್ರಮಗಳಿಗೆ ಮಾತ್ರ ಉಪಯೋಗಿಸುವುದೆಂಬ ಷರತ್ತಿಗೆ ಒಳಪಟ್ಟು, 2020-21ನೇ ಸಾಲಿನ ಆಯವ್ಯಯದ ಅನುಮೋದನೆಯನ್ನು ಸರ್ಕಾರದಿಂದ ನಿರೀಕ್ಷಿಸಿ, ಸದರಿ ಅನುದಾನವನ್ನು ನಗರ ಪಾಲಿಕೆ ವಾರ್ಡಿನ ಸದಸ್ಯರುಗಳು ಕೋರುವ ಕೋವಿಡ್-19ರ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಹಾಗೂ ಸದರಿ ಅನುದಾನವನ್ನು ಸಾದಿಲ್ವಾರು ಬಿಲ್ ಮುಖಾಂತರ ಪಾವತಿಸಲು ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು" ಎಂದು ನಿರ್ಣಯವಾಗಿರುತ್ತದೆ.

ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಪಾಲಿಕೆಯ 2020-21ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ವಾರ್ಡ್‌ಗೆ ರೂ.20.00 ಲಕ್ಷಗಳಂತೆ ಮೀಸಲಿರಿಸಿರುವ ಅನುದಾನವನ್ನು ಬಳಕೆ ಮಾಡಲು ಪಾಲಿಕೆಯ ಸ್ವ-ನಿರ್ಣಯವನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಮು.ತಿ.ನೋ.

# ತಿದ್ದುಪಡಿ ಆದೇಶ

**ಸಂ:ಆಯುಕ್ತರು/ಪಿಎಸ್‌ಆರ್/ಜಿ-92/2020-21**
**ಬೆಂಗಳೂರು, ದಿನಾಂಕ:28-05-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2020-21ನೇ ಸಾಲಿನ ಆಯವ್ಯಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟುವ ಸಲುವಾಗಿ ಪ್ರತಿ ವಾರ್ಡ್‌ಗೆ ರೂ.20.00 ಲಕ್ಷಗಳಂತೆ ಅನುದಾನವನ್ನು ಸರ್ಕಾರದ ಆದೇಶ ಸಂ:ನಅಇ/19/ಎಂಎನ್‌ವೈ/2020(ಇ), ದಿನಾಂಕ:13-05-2020ರಂತೆ ಆಯವ್ಯಯ ಲೆಕ್ಕಶೀರ್ಷಿಕೆ: ಪಿ-1771 ರಿಂದ ಅನುದಾನವನ್ನು ವರ್ಗಾಯಿಸಿ, ನೂತನ ಲೆಕ್ಕಶೀರ್ಷಿಕೆಯಡಿ ಪ್ರತ್ಯೇಕವಾಗಿ ಮೀಸಲಿರಿಸಲಾಗಿರುತ್ತದೆ. ಅದರಂತೆ, ಲೆಕ್ಕಶೀರ್ಷಿಕೆ : ಪಿ-3850 ಅಡಿಯಲ್ಲಿ ರೂ.3960.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಅನುದಾನವನ್ನು ಬಳಸಿಕೊಳ್ಳಲು **ಜಾಬ್‌ಸಂಖ್ಯೆ ಅವಶ್ಯಕತೆಯಿರುವುದಿಲ್ಲ**. ಈ ಕೆಳಕಂಡಂತೆ ಸಂಬಂಧಪಟ್ಟ ಅಭಿಯಂತರರು/ಅಧಿಕಾರಿಗಳು ಕ್ರಮವಹಿಸಲು ಸೂಚಿಸಿದೆ.

- ಲೆಕ್ಕಶೀರ್ಷಿಕೆ : ಪಿ-3850 ಅಡಿಯಲ್ಲಿ ಪ್ರತಿ ವಾರ್ಡಿಗೆ ರೂ.20.00 ಲಕ್ಷ ಮೀಸಲಿರಿಸಿರುವ ಅನುದಾನಕ್ಕೆ ಸೀಮಿತಗೊಳಿಸಿ, ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಉಪಯುಕ್ತವಾದ ಕಾರ್ಯಕ್ರಮಗಳಾಗಿವೆಯೇ ಎಂಬುದರ ಬಗ್ಗೆ ಸಂಬಂಧಿಸಿದ ವಲಯ ಮುಖ್ಯ ಅಭಿಯಂತರರು, ವಲಯ ಅಪರ/ಜಂಟಿ ಆಯುಕ್ತರವರು ದೃಢೀಕರಿಸಿಕೊಳ್ಳುವುದು.

- ದೃಢೀಕೃತ ಕಾರ್ಯಕ್ರಮಗಳ ವಿವರಗಳನ್ನು ಆಯಾ ವಾರ್ಡ್‌ನ ವಿಪತ್ತು ನಿರ್ವಹಣೆ ಸಮಿತಿಯ ಮುಂದೆ ಮಂಡಿಸಿ, ಸಮಿತಿಯು ತೀರ್ಮಾನಿಸಿದ ಉದ್ದೇಶಗಳಿಗೆ ಮಾತ್ರ ಬಳಕೆ ಮಾಡುವುದು.

- ಕೆ.ಟಿ.ಪಿ.ಪಿ. ನಿಯಮಾವಳಿಗಳಂತೆ ಹಾಗೂ ಇತರೆ ಚಾಲ್ತಿಯಲ್ಲಿರುವ ನಿಯಮ ಮತ್ತು ಆದೇಶಗಳಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೇರವಾಗಿ ಕಾರ್ಯಕ್ರಮಗಳನ್ನು ವಹಿಸಿ, ನಿರ್ವಹಿಸತಕ್ಕದ್ದಲ್ಲ.

ಮು.ತಿ.ನೋ.

- ಕೋವಿಡ್–19 ಸಾಂಕ್ರಾಮಿಕ ರೋಗ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಒಳಗೊಂಡ ಅಂಶಗಳು ಈಗಾಗಲೇ ಅನುಮೋದನೆಗೊಂಡ ದರಗಳು, ಲೋಕೋಪಯೋಗಿ ಇಲಾಖೆಯಿಂದ ಅನುಮೋದಿತ ಚಾಲ್ತಿ ದರಪಟ್ಟಿಯಂತೆ ಅಳವಡಿಸಿಕೊಳ್ಳುವುದು ದರಪಟ್ಟಿಯಲ್ಲಿಲ್ಲದ ಐಟಂಗಳಿಗೆ ಚಾಲ್ತಿ ಮಾರುಕಟ್ಟೆ ದರಕ್ಕೆ ಕೊಟೇಷನ್ ಕರೆದು ಸ್ಪರ್ಧಾತ್ಮಕ ದರಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ಅಳವಡಿಸಿಕೊಂಡು ಪಿ.ಡಬ್ಲ್ಯೂ.ಡಿ. ಕೋಡ್ ನಾರ್ಮ್ಸ್ ನಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ನಂತರ ಸಂಬಂಧಪಟ್ಟ ಸರಬರಾಜುದಾರರು/ ಗುತ್ತಿಗೆದಾರರ ಬಿಲ್ಲುಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ದೃಢೀಕರಿಸಿಕೊಂಡು ಪಾಲಿಕೆಯ ನಿರ್ಣಯದಂತೆ ಡಿ.ಸಿ.ಬಿಲ್ಲು ತಯಾರಿಸಿ, ವಲಯ ಉಪ ನಿಯಂತ್ರಕರು (ಹಣಕಾಸು) ಕಛೇರಿಗೆ ಪಾವತಿಗಾಗಿ ಸಲ್ಲಿಸುವುದು. ಉಪ ನಿಯಂತ್ರಕರು (ಹಣಕಾಸು)ರವರು ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಅನುದಾನವನ್ನು ಪಡೆದು ಪಾವತಿಗೆ ಕ್ರಮವಹಿಸುವುದು.

ಮೇಲ್ಕಂಡ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ನಿಗಧಿತ ಉದ್ದೇಶಕ್ಕೆ ಬದಲಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳತಕ್ಕದ್ದಲ್ಲ. ಅನ್ಯ ಉದ್ದೇಶಕ್ಕೆ ಬಳಕೆ ಮಾಡಿದಲ್ಲಿ ಸಂಬಂಧಪಟ್ಟ ಅಭಿಯಂತರರು/ಅಧಿಕಾರಿಗಳನ್ನೇ ವೈಯಕ್ತಿಕವಾಗಿ ನೇರಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸೂಚಿಸಿ, ಆದೇಶಿಸಲಾಗಿದೆ.

ಆಯುಕ್ತರು 28/7/2020
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

1. ಪೂಜ್ಯ ಮಹಾಪೌರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪಮಹಾಪೌರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಹಣಕಾಸು/ಯೋಜನೆ/ಘನತ್ಯಾಜ್ಯ ನಿರ್ವಹಣೆ/ಕಲ್ಯಾಣ/ಆಸ್ತಿಗಳು)ರವರಿಗೆ ಮಾಹಿತಿಗಾಗಿ.
4. ಎಲ್ಲಾ ವಲಯ ಆಯುಕ್ತರು ರವರಿಗೆ ಮಾಹಿತಿಗಾಗಿ.
5. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರು ರವರಿಗೆ ಸೂಕ್ತಕ್ರಮಕ್ಕಾಗಿ.
6. ಪ್ರಧಾನ ಅಭಿಯಂತರರಿಗೆ ಮುಂದಿನ ಸೂಕ್ತಕ್ರಮಕ್ಕಾಗಿ.
7. ಮುಖ್ಯಲೆಕ್ಕಾಧಿಕಾರಿಗಳಿಗೆ ಮುಂದಿನ ಸೂಕ್ತಕ್ರಮಕ್ಕಾಗಿ.
8. ಮುಖ್ಯ ಆರ್ಥಿಕ ಅಧಿಕಾರಿಗಳಿಗೆ ಮುಂದಿನ ಸೂಕ್ತಕ್ರಮಕ್ಕಾಗಿ.
9. ಎಲ್ಲಾ ವಲಯ ಮತ್ತು ಕೇಂದ್ರದ ಮುಖ್ಯ ಅಭಿಯಂತರರುಗಳ ಸೂಕ್ತಕ್ರಮಕ್ಕಾಗಿ.
10. ಎಲ್ಲಾ ವಿಭಾಗೀಯ ಕಾರ್ಯಪಾಲಕ ಅಭಿಯಂತರರುಗಳ ಸೂಕ್ತಕ್ರಮಕ್ಕಾಗಿ.
11. ಎಲ್ಲಾ ವಲಯಗಳ ಉಪನಿಯಂತ್ರಕರು (ಹಣಕಾಸು)ರವರುಗಳಿಗೆ ಸೂಕ್ತಕ್ರಮಕ್ಕಾಗಿ.
12. ಕಛೇರಿ ಕಡತಕ್ಕೆ.